ಆರೋಗ್ಯ ಕೇಂದ್ರಗಳಲ್ಲಿನ ರಕ್ಷಾ ಸಮಿತಿ ಹಣ ದುರುಪಯೋಗ
59 (35)

ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)

ಅ) ಅರಸೀಕೆರೆ ಮತ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರ, ಹೋಬಳಿ ಮತ್ತು ತಾಲ್ಲೂಕು ಮಟ್ಟದ ಆರೋಗ್ಯ ಕೇಂದ್ರಗಳಿಗೆ 2012–13 ನೇ ಸಾಲಿನಲ್ಲಿ ರಕ್ಷಾ ಸಮಿತಿಗೆ ಬಿಡುಗಡೆ ಮಾಡಿದ ಹಣದ ಮೊತ್ತವೆಷ್ಟು ?

ಆ) ಈ ಹಣವನ್ನು ಖರ್ಚು ಮಾಡಲು ನಿಗದಿಪಡಿಸಿರುವ ಮಾನದಂಡಗಳೇನು ?

ಇ) ಕೆಲವು ಆರೋಗ್ಯ ಕೇಂದ್ರಗಳಲ್ಲಿ ಹಣ ದುರುಪಯೋಗ–ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಅರವಿಂದ ಲಿಂಬಾವಳಿ
(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಅರಸೀಕೆರೆ ಮತ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕೇಂದ್ರ, ಹೋಬಳಿ ಮತ್ತು ತಾಲ್ಲೂಕು ಮಟ್ಟದ ಆರೋಗ್ಯ ಕೇಂದ್ರಗಳಿಗೆ 2012–13 ನೇ ಸಾಲಿನಲ್ಲಿ ರಕ್ಷಾ ಸಮಿತಿಗೆ ಬಿಡುಗಡೆ ಮಾಡಿದ ಹಣವನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಆ) ಪ್ರಾ.ಆ.ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಆರೋಗ್ಯ ರಕ್ಷಾ ಸಮಿತಿಗಳನ್ನು ಸ್ಥಾಪಿಸಲಾಗಿದೆ. ವರ್ಷದ ಪ್ರಾರಂಭದಲ್ಲಿ ಅನುಮೋದಿತ ಅನುದಾನಕ್ಕೆ ಅನುಗುಣವಾಗಿ ಸಂಬಂಧಪಟ್ಟ ಆಸ್ಪತ್ರೆಯ ಅವಶ್ಯಕತೆಗಳನ್ನು ಗಮನದಲ್ಲಿಟ್ಟು ಆರೋಗ್ಯ ರಕ್ಷಾ ಸಮಿತಿಯು ಕ್ರಿಯಾ ಯೋಜನೆಗೆ ಅನುಮೋದನೆಯನ್ನು ನೀಡಿರುತ್ತದೆ. ಆರೋಗ್ಯ ರಕ್ಷಾ ಸಮಿತಿಯಿಂದ ಅನುಮೋದಿತ ಕ್ರಿಯಾ ಯೋಜನೆಯನ್ನಾಧರಿಸಿ ವೆಚ್ಚವನ್ನು ಮಾಡಲಾಗುತ್ತದೆ.

ಇ) ಅರಸೀಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಕೆಂಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಣದ ದುರುಪಯೋಗ ಪ್ರಸಂಗವು ಲೆಕ್ಕತಪಾಸಣೆ ವೇಳೆ ಕಂಡುಬಂದಿರುತ್ತದೆ ಹಾಗೂ ತಪ್ಪಿತಸ್ಥ ವೈದ್ಯಾಧಿಕಾರಿ ವಿರುದ್ಧ ಆರೋಪ ಪಟ್ಟಿ ಜಾರಿಗೊಳಿಸಿದ್ದು, ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ.

ಅನುಬಂಧ–1

Taluk Health Office: ARSIKERE			
Sl.No.	**Name of the PHC/CHC/TH**	**Amount released in current Financial Year (2012-13)**	**Remarks**
1	GH. Arsikere	173132	
2	PHC Javagal	91931	
3	PHC Haranahalli	146254	
4	PHC Bhagivalu	123424	
5	PHC Kondenalu	121929	
6	PHC D.M.Kurke	146403	
7	PHC Kankatte	135423	
8	PHC Bhageshpura	147960	
9	PHC Hiresadarahalli	106956	
10	PHC Kenkere	15000	Rs. 1,23,000.00 remains unspent from the previous year releases towards ARS.
11	PHC Kalyadi	9648	Rs. 1,55,552.00 remains unspent from the previous year releases towards ARS.
12	PHC Banavara	129483	
13	PHC Shashivala	139267	
14	PHC Kallu Sadarahalli.	133958	
15	PHU Undigdanalu	136154	
16	PHU Handralu	126490	
17	PHU Tholalutore	144048	
18	PHU Nerlligge	140144	
19	PHU Madalu	122094	
20	PHU R.N. Koppalu	106221	
21	PHU Kolgunda	144025	
22	PHU Karagunda	142048	
23	CHC Gandasi	23577	Rs. 2,71,212.00 remains unspent from the previous year releases towards ARS.
24	CHC J.C.Pura	174429	
25	Kamasamudra	148048	
	Total	**3028046**	

Source: District Health & Family Welfare Office, Hassan.